ನವಿರವಿ, ಬಾಳೆಹೊನ್ನೂರು

*ಆಹಾರ ಕಂಡಾಗ ಕಾಗೆ ಸುಮ್ಮನೆ ತಿಂದು ಹೋಗದೆ ಕಾ,ಕಾ,ಕಾ ಅನ್ನುವುದು ಏಕೆ?*




ನಿಮಗಿಲ್ಲದ ಹಂಚಿತಿನ್ನುವ ಗುಣ ಅದಕ್ಕಿದ್ದರೆ ನಿಮಗೇಕೆ ಕೋಪ? ಅದು ಕಾ,ಕಾ, ಅಲ್ಲ; ಖಾ, ಖಾ! ಕಾಗೆಯ ಮಾತೃಭಾಷೆ ಹಿಂದಿ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ

*ಪರರನ್ನು ದೂಷಿಸಲು ಬಳಸುವ ನಾಲಿಗೆಯನ್ನು ಏನೆನ್ನಬಹುದು?*

ನ್ಯೂಸ್ ಚಾನಲ್.

ರತ್ನಾ ಅಶೋಕ ಗೊರವರ, ನವಲಗುಂದ

*ಮೋಸ, ವಂಚನೆ ಮಾಡುವುದನ್ನು ನರಿಯನ್ನು ನೋಡಿ ಮಾನವರು ಕಲಿತರೋ ಅಥವಾ ಮಾನವರನ್ನು ನೋಡಿ ನರಿ ಕಲಿಯಿತೋ?*

ರ ಆದ ಮೇಲೆಯೇ ರಿ ಬರುವುದಲ್ಲವೇ; ನರ, ನರಿ!

ಪ್ರತಿಮಾ ಬಾಯರಿ, ಶಿವಮೊಗ್ಗ

*ಪೊಲೀಸರಿಗೇಕೆ ದಪ್ಪ ಹೊಟ್ಟೆ ಇರುತ್ತದೆ?*

ಎಷ್ಟೋ ಜನರ ತಪ್ಪುಗಳನ್ನು ಹೊಟ್ಟೆಗೆ ಹಾಕಿಕೊಳ್ಳುವುದರಿಂದ!

ಶಾಂತಾಬಾಯಿ ಎಂ. ಪೈ, ಕಾಸರಕೋಡ

*ಪ್ರೀತಿಸಿ ಮೋಸ ಹೋದರೂ ಮತ್ತೆ ಪ್ರೀತಿಸುವುದೇಕೆ?*



ಅವರು ದೀಪದ ಹುಳುವಿನ ವಂಶದವರಂತೆ!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ

*ನಿಜಕ್ಕೂ ಗಂಡು ಹೆಣ್ಣಿನಲ್ಲಿ ಹುಡುಕುವುದು ಏನನ್ನು?*

ಕೆಡುಕನಾದರೆ ಕ್ಷಮೆ, ಸುಗುಣಿಯಾದರೆ ಸಖ್ಯ, ಕುಡುಕನಾದರೆ ಪುಡಿಗಾಸು!

ಓಂ ಚನ್ನೇಶ್, ಅರಬಿಳಚಿ ಕ್ಯಾಂಪ್

*ಮದುವೆಯಾದ ನವಜೋಡಿ ಸಪ್ತಪದಿ ತುಳಿಯುವುದೇಕೆ?*

ಒಂದೊಂದು ಸ್ವರಕ್ಕೆ ಒಂದೊಂದು ಹೆಜ್ಜೆ, ತನ್ಮೂಲಕ ಸಂಸಾರವೇ ಸಂಗೀತ ಎಂದು ಸೂಚಿಸಲು!

ಶ್ವೇತಾಲಕ್ಷ್ಮಿ ಅಮ್ಮೆ, ಬೆಂಗಳೂರು

*ಮಾತಿನಲ್ಲೇ ಮನೆ ಕಟ್ಟುವವರು ಯಾರು?*

ಮಾತಿನಲ್ಲೇ ಪರರ ಮನೆ ಹಾಳುಮಾಡುವ ಜ್ಯೋತಿಷಿಗಳು, ವಾಸ್ತುತಜ್ಞರು, ಯಂತ್ರಜ್ಞರು, ನ್ಯೂಮರಾಲಜಿಸ್ಟು.......

ನೇ.ಗೋ.ಭ. ಕುಕ್ಕೆ ಸುಬ್ರಹ್ಮಣ್ಯ

*ಅರಸುಗಳಿಗಿದು ವೀರ..... ನಿಮ್ಮ ಉತ್ತರವೂ ಹೀಗೆಯೇ ಇರುತ್ತದೆಯೇ ಸಾರ್?*

ಹೃದಯಗಳಿಗಿದು ನೇರ, ಕೊಳಕು ಮನಕಿದು ಘೋರ, ರಸಿಕ ಮನಕಿದು ಸಾರ..... ಆಗಿಸುವ ನಮ್ಮ ಪ್ರಯತ್ನವಷ್ಟೆ.

ಎಸ್. ಪ್ರಭಾ, ಬೆಂಗಳೂರು

*ಬುದ್ಧಿಮಾತನ್ನು ಎರಡೂ ಕಿವಿಗಳಲ್ಲಿ ಉಳಿಸಿಕೊಳ್ಳುವುದು ಹೇಗೆ ರಾಂಜೀ?*

ಬುದ್ಧಿಮಾತಿನ ಕ್ಯಾಸೆಟ್ಟನ್ನು ಪರ್ಮನೆಂಟಾಗಿ ಹೆಡ್‌ಸೆಟ್ ಹಾಕಿಕೊಂಡು ಕೇಳುವುದರ ಮೂಲಕ.

ಕೋಕಿಲ ಡಿ. ಕುರುವಳ್ಳಿ

*ವ್ಯಕ್ತಿ ಸ್ವಾತಂತ್ರ್ಯಕ್ಕೆ ಬೆಲೆ ಎಲ್ಲಿದೆ?*

ಪ್ರತಿ ವ್ಯಕ್ತಿಯನ್ನು ಸ್ವತಂತ್ರವಾಗಿಸಲು ಇಷ್ಟು ಬೇಯ್ಲ್ ಎಂದು ಬೆಲೆ ನಿಗದಿಸುವ ನ್ಯಾಯಾಲಯದಲ್ಲಿ.

ಚನ್ನಬಸವ, ಉಡುಪಿ

*ನನ್ನ ಹೆಂಡತಿ ಸದಾ ಗೂಬೆ ಕೂರಿಸುತ್ತಾಳೆ. ನಿಮ್ಮ ಹೆಂಡತಿ?*

ಅವಳೇಕೆ ಕೂಡಿಸಬೇಕು? ನನಗೇ ಕುಳಿತುಕೊಳ್ಳಲು ಬರುತ್ತದೆ!

ಎನ್.ವಿ. ಶ್ರೀನಿವಾಸ್, ಮೈಸೂರು

*ಕುದುರೆ ಸವಾರಿ ಮಾಡಿದರೂ ನಮ್ಮ ಹೊಟ್ಟೆ ಕರಗದಿದ್ದರೆ ಏನು ಮಾಡಬೇಕು?*

ಮುಂದುವರೆಸಿರಿ. ಕುದುರೆಯಾದರೂ ಸಣ್ಣಗಾಗಲಿ.

ಡೈರಿ ವಿಶ್ವನಾಥ್, ಬೆಂಗಳೂರು

*ದಾನದಲ್ಲಿ ನಿಮಗೆ ನಂಬಿಕೆ ಇದೆಯೆ?*

ಹಿತ್ತಲಲ್ಲಿ ಹೋಗಿ ಮೊಳ ಹಾಕುವುದರಲ್ಲಂತೂ ನಂಬಿಕೆ ಇದೆ.

## ಬಹುಮಾನಿತ ಪ್ರಶ್ನೆ

ಎಲ್.ಸುಮಂತ್, ಮಂಗನಹಳ್ಳಿ

*ಮನಸ್ಸು ಎಂಬ ಅಗೋಚರ ಅಂಗ ಇರುವುದು ಹೃದಯದಲ್ಲೋ ಅಥವಾ ಮೆದುಳಿನಲ್ಲೋ ರಾಮ್‌ಜಿ?*

ಪ್ರೀತಿಗಾದರೆ ಹೃದಯದಲ್ಲಿ, ವ್ಯವಹಾರಕ್ಕಾದರೆ ಮೆದುಳಿನಲ್ಲಿ!

ದಿವ್ಯಾರಾಣಿ, ಬಾಗೂರು

*ಬೇಗ ಸಿರಿವಂತರಾಗಬೇಕೆನ್ನುವ ಯುವಮಿತ್ರರಿಗೆ ನಿಮ್ಮ ಉತ್ತರವೇನು?*

ಆಟೋದಂತೆ ಅಡ್ಡಾದಿಡ್ಡಿ ಹೋಗದೆ ಬುಲ್‌ಡೋಜರ್‌ನಂತೆ ನೇರವಾಗಿ ಸಾಗಿದರೆ ಕಷ್ಟ ದೂರ, ಗುರಿ ಹತ್ತಿರ.

ಎನ್.ಎಂ. ಶಿವಶಂಕರ್, ಮೈಸೂರು

*ಶತ್ರುವಿಗೂ, ಹಿತಶತ್ರುವಿಗೂ ಏನು ವ್ಯತ್ಯಾಸ?*

ಶತ್ರು ನೇರವಾಗಿ ಅರಿಯಬಲ್ಲ ಸಯನೈಡ್, ಹಿತಶತ್ರು ತರಕಾರಿಗಳ ಮೂಲಕ ಒಳಸೇರುವ ಪೆಸ್ಟಿಸೈಡ್.

ಸಿ.ನಾಗರಾಜ, ಅರದೊಟ್ಟು

*ಮನೆಯೇ ದೇವಾಲಯ, ಪತಿಯೇ ದೇವರು; ಸತಿಯೇ ನಂದಾದೀಪ. ಮಕ್ಕಳು?*



ಗಂಟೆ, ಜಾಗಟೆ, ಡೋಲು, ಮದ್ದಳೆ....

ಚನ್ನಬಸವ ಪುತ್ತೂರು, ಚಿತ್ರದುರ್ಗ

*ತಪ್ಪು ತಿಳೀಬೇಡಿ, ಆ ರಾಮನಿಗೂ, ಈ ರಾಮ್‌ನಿಗೂ ಏನು ನಂಟು?*

ಆ ರಾಮನದು ರಾಮಾಯಣ, ಈ ರಾಮ್‌ನದು ಉತ್ತರರಾಮಚರಿತ!

ಆರ್. ನಾಗರಾಜ್, ಗೊರೂರು

*ಊರಿಗೆ ಬಂದ ಅವಳು ನೀರಿಗೆ ಬರೋಕ್ಕೆ ನಾಚಿಕೊಳ್ತಿದ್ದಾಳಲ್ಲಾ...?*

ನೀವು ಕೆರೆಯ ಪಕ್ಕ ಕೀಚಕನ ಪೋಸ್‌ನಲ್ಲಿ ನಿಂತಿದ್ದಿರಂತೆ.....

■ ರಾಮ್